**ದಿನಾಂಕಃ 04.10.2025 ರಂದು ಪಿಡಬ್ಲೂ-1 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು: ಆರೋಪಿ ಪರ ಶ್ರೀ.ಪಿ ಬಿ ಜಿ ವಕೀಲರಿಂದಃ-**

1. ನಾನು ಜಮಖಂಡಿ ಪಟ್ಟಣದ ಖಾಯಂ ನಿವಾಸಿಯಾಗಿರುತ್ತೇನೆ. ನಾನು 10ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಗ್ಯಾರೇಜ್ ಇಟ್ಟುಕೊಂಡಿರುತ್ತೇನೆ. ಆರೋಪಿ ನನ್ನ ಸಂಬಂಧಿಕರು ಇರುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಿದ್ಧಪಡಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ನಾನು ಲೇವಾದೇವಿ ವ್ಯವಹಾರದ ಲೈಸನ್ಸ ಪಡೆದಿರುವುದಿಲ್ಲ. ಆರೋಪಿಯು ತನ್ನ ಕುಟುಂಬದ ಅಡಚಣೆಗಾಗಿ ಹಣ ಬೇಕು ಎಂದು ನನ್ನನ್ನು ಕೇಳಿದ್ದಕ್ಕೆ, ನಾನು ಅವರಿಗೆ ರೂ.2,65,000/- ಹಣ ನೀಡಿರುತ್ತೇನೆ. ಸದರಿ ಹಣವನ್ನು ನಾನು ಆರೋಪಿಗೆ ದಿನಾಂಕ 24.09.2022 ರಂದು ಕೊಟ್ಟಿರುತ್ತೇನೆ. ಸದರಿ ಮೊತ್ತದ ಹಣವನ್ನು ನಾನು ನಗದು ರೂಪದಲ್ಲಿ ಆರೋಪಿಗೆ ನೀಡಿರುತ್ತೇನೆ.

2. ನನಗೆ ಮಾಸಿಕ ರೂ.45,000/- ರಿಂದ 50,000/- ಆದಾಯವಿರುತ್ತದೆ. ನಾನು ಆದಾಯ ತೆರಿಗೆ ಇಲಾಖೆಗೆ ವಾರ್ಷಿಕ ವರದಿ ಸಲ್ಲಿಸುವುದಿಲ್ಲ. ನಾನು ಬಿಪಿಎಲ್ ಕಾರ್ಡ ಹೊಂದಿರುತ್ತೇನೆ ಎಂದರೆ ಸರಿ. ನನ್ನ ಗ್ಯಾರೇಜನಲ್ಲಿ ಕೆಲಸ ಮಾಡಿ ಗಳಿಸಿದ ಹಣದ ಪೈಕಿ ನಾನು ಆರೋಪಿಗೆ ರೂ.2,65,000/- ಹಣ ಸಾಲ ನೀಡಿರುತ್ತೇನೆ. ನನ್ನ ಮಾಸಿಕ ಆದಾಯ ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ.

3. ನಾನು ಆರೋಪಿಗೆ ರೂ.2,65,000/- ಹಣ ನೀಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಇಬ್ಬರು ಗಂಡು ಮಕ್ಕಳು ಇರುತ್ತಾರೆ ಎಂದರೆ ಸರಿ. ಆರೋಪಿಯ ಮೊದಲನೇ ಮಗ ಇಂಜಿನೀಯರ್ ಇರುತ್ತಾರೆ, 2ನೇ ಮಗ ಖಾಸಗಿ ಕೆಲಸ ಮಾಡುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 20.07.2021 ರಂದು ಆರೋಪಿಯ ಗಂಡ ಮರಣ ಹೊಂದಿರುತ್ತಾರೆ ಎಂದರೆ ಸರಿ. ಆರೋಪಿಯ ಗಂಡ ಮರಣ ಹೊಂದಿದ ಒಂದು ವಾರದ ನಂತರ ನಾನು ಆರೋಪಿಯ ಮನೆಗೆ ಹೋಗಿ "ನಿನ್ನ ಗಂಡ ನನ್ನಿಂದ ರೂ.75,000/- ಹಣ ಸಾಲ ಪಡೆದಿರುತ್ತಾರೆ, ಅದನ್ನು ಮರಳಿ ಕೊಡು" ಎಂದು ಹೇಳಿ ಜಗಳ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಸಾಲದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ಆರೋಪಿಯು ನನಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ

21.09.2022 ರಂದು ಆರೋಪಿಯ ಹೆಸರಿನಲ್ಲಿ ರೂ.200/- ಮೌಲ್ಯದ ಬಾಂಡ್ ಪೇಪರನ್ನು ನಾನೇ ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಖಾಲಿ ಬಾಂಡ್ ಪೇಪರ್ ಮೇಲೆ ಆರೋಪಿಯ ಒಂದು ಫೋಟೋ ಅಂಟಿಸಿ, ಅದರ ಮೇಲೆ ಆಕೆಯ ಸಹಿ ಪಡೆದು, ನಂತರ ಸಾಲದ ಭದ್ರತೆಗಾಗಿ ಒಂದು ಬ್ಲ್ಯಾಂಕ್ ಚೆಕ್ ಸಹ ಆರೋಪಿಯಿಂದ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಬಾಂಡ್ ಪೇಪರ್ ಮೇಲೆ ದಿನಾಂಕ 24.09.2022 ಎಂದು ನಮೂದಿಸಿ, ನನಗೆ ಬೇಕಾದ ಹಾಗೆ ಪತ್ರವನ್ನು ಬರೆದುಕೊಂಡು, ಅದರಲ್ಲಿ ರೂ.2,65,000/- ಸಾಲ ಎಂದು ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕ 25.03.2023 ರಂದು ಆರೋಪಿಯು ಎಸ್.ಬಿ.ಐ ಬ್ಯಾಂಕಿನ ಒಂದು ಚೆಕ್ ನನಗೆ ನೀಡಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ನಾನು ಸುಳ್ಳು ದಾಖಲೆ ಸೃಷ್ಟಿಸಿ ಮತ್ತು ಸುಳ್ಳು ಮೊತ್ತವನ್ನು ಚೆಕ್ಕನಲ್ಲಿ ನಮೂದಿಸಿ ಬ್ಯಾಂಕಿಗೆ ಹಾಜರುಪಡಿಸಿ, ಈಗ ಅವರ ವಿರುದ್ಧ ಸುಳ್ಳು ಫಿರ್ಯಾದನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರಸ್ತುತ ಫಿರ್ಯಾದಿನ ಬಗ್ಗೆ ಆರೋಪಿಗೆ ನ್ಯಾಯಾಲಯದಿಂದ ಸಮನ್ಸ ಬಂದ ನಂತರವೇ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣದಲ್ಲಿ ಆರೋಪಿಯು ಸಮನ್ಸ ಪಡೆದ ನಂತರ, ಆಕೆ ನನ್ನನ್ನು ವಿಚಾರಿಸಿ ಈಗಾಗಲೇ ತೆಗೆದುಕೊಂಡಿರುವ ಸಾಲವನ್ನು ಸಂಪೂರ್ಣವಾಗಿ ಮರುಪಾವತಿ ಮಾಡಿರುತ್ತೇನೆ ಎಂದು ಹೇಳಿದಾಗ, ನಾನು ಆಕೆಗೆ ಇನ್ನೂ ಬಡ್ಡಿ ಹಣ ಕೊಡಬೇಕು ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಫಿರ್ಯಾದು ಸಲ್ಲಿಸಿರುತ್ತೇನೆ, ಅಲ್ಲಿಯೇ ಬಂದು ನೀವು ಹೇಳಿ ಎಂದು ಆರೋಪಿಯೊಂದಿಗೆ ನಾನು ಜಗಳ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯ ಮಗನಾದ ಪವನ್ ಇವರ ಖಾತೆಯಿಂದ ಆರೋಪಿಯು ಪಡೆದ ಸಾಲವನ್ನು ಮರುಪಾವತಿ ಮಾಡಲಾಗಿದೆ ಎಂದರೆ ಸರಿಯಲ್ಲ. ದಿನಾಂಕ 29.12.2021 ರಂದು ರೂ.25,000/-, ದಿನಾಂಕ 16.08.2022 ರಂದು ರೂ.10,000/-, ದಿನಾಂಕ 14.10.2022 ರಂದು ರೂ.3,000/- ಮತ್ತು ದಿನಾಂಕ 04.11.2022 ರಂದು ರೂ.5,000/- ಒಟ್ಟು ರೂ.43,000/- ಹಣವನ್ನು ಸದರಿ ಪವನ್ ಇವರ ಖಾತೆಯಿಂದ ನನ್ನ ಖಾತೆಗೆ ಫೋನ್ ಪೇ ಮೂಲಕ ವರ್ಗಾಯಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಉಳಿದ ರೂ.32,000/- ಹಣವನ್ನು ಜನೇವರಿ-2023 ರಲ್ಲಿ ನಾನು ಆರೋಪಿಯ

ಮನೆಗೆ ಹೋಗಿ ಸದರಿ ಹಣವನ್ನು ನಗದು ರೂಪದಲ್ಲಿ ಆರೋಪಿಯಿಂದ ಸ್ವೀಕರಿಸಿರುತ್ತೇನೆ ಎಂದರೆ ಸರಿಯಲ್ಲ.

5. ಆರೋಪಿಯ ಗಂಡನಿಂದ ಬರಬೇಕಾದ ರೂ.75,000/- ಹಣ ನನಗೆ ಸಂಪೂರ್ಣವಾಗಿ ಮುಟ್ಟಿರುತ್ತವೆ ಎಂದರೆ ಸರಿಯಲ್ಲ. ಸದರಿ ಹಣ ಪಾವತಿಯಾದ ನಂತರ ನಾನು ಖಾಲಿ ಬಾಂಡ್ ಪೇಪರ್ ಮತ್ತು ಚೆಕ್ ಆರೋಪಿಗೆ ಹಿಂದಿರುಗಿಸದೇ ಈ ಸುಳ್ಳು ಫಿರ್ಯಾದನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ಸರಕಾರಿ ಶಾಲೆಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ. ಆರೋಪಿಗೆ ಮಾಸಿಕ ರೂ.90,000/- ಸಂಬಳವಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯ ಇಬ್ಬರು ಮಕ್ಕಳ ಒಟ್ಟು ಮಾಸಿಕ ಆದಾಯ ರೂ.50,000/- ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯು ಸರಕಾರಿ ನೌಕರಳಾಗಿದ್ದು, ಆಕೆಯು ಬ್ಯಾಂಕಿನಲ್ಲಿ ಮತ್ತು ಕೆಜಿಐಡಿ ಸಾಲಗಳನ್ನು ಪಡೆಯಬಹುದಾಗಿದ್ದು, ಆಕೆ ಖಾಸಗಿ ವ್ಯಕ್ತಿಗಳಿಂದ ಸಾಲ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಅಂತ್ಯೋದಯ ಕಾರ್ಡ ಹೊಂದಿರುತ್ತೇನೆ. ನಾನು ಬಡತನ ರೇಖೆಯ ಕೆಳಮಟ್ಟದ ವ್ಯಕ್ತಿಯಾಗಿರುವುದರಿಂದ, ಆರೋಪಿಗೆ ಸಾಲ ಕೊಡುವಷ್ಟು ಆರ್ಥಿಕ ಸ್ಥಿತಿಗತಿ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಸರಕಾರಿ ನೌಕರಳಾಗಿರುವುದರಿಂದ, ಆಕೆಯಿಂದ ಸುಲಭವಾಗಿ ಹಣ ವಸೂಲಿ ಮಾಡಬಹುದು ಎಂದು ನಾನು ಸುಳ್ಳು ಫಿರ್ಯಾದು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಮತ್ತು ನನ್ನ ಮಧ್ಯ ಈಗ ಯಾವುದೇ ವ್ಯವಹಾರ ಇರುವುದಿಲ್ಲ ಮತ್ತು ಆರೋಪಿಯು ತಾನು ಕೊಡಬೇಕಾದ ಸಾಲವನ್ನು ಈಗಾಗಲೇ ಮರುಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಖೊಟ್ಟಿ ಬಾಂಡ್ ಮತ್ತು ಚೆಕ್ಕನ್ನು ದುರುಪಯೋಗ ಮಾಡಿಕೊಂಡು ಈ ಸುಳ್ಳು ಫಿರ್ಯಾದನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಅದೆ.

RAJASHEKHAR Digitally signed by RAJASHEKHAR Date: 2025.10.04 16:14:29 +0530

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.